International Journal of Kannada Research 2019; 5(2): 60-63

International Journal of Kannada Research
www.kannadajournal.com

**ISSN: 2454–5813**
IJKR 2019; 5(2): 60-63
© 2019 IJKR
www.kannadajournal.com
Received: 01-02-2019
Accepted: 03-03-2019

**ಡಾ. ಪ್ರತಿಮಾ ಕೆ.ಪಿ**
ಸಹಾಯಕ ಪ್ರಾಧ್ಯಾಪಕರು
ಮಹಿಳಾ ಸರ್ಕಾರಿ ಕಾಲೇಜು,
ಮದ್ದೂರು–571428
ಮಂಡ್ಯ ಜಿಲ್ಲೆ, ಕರ್ನಾಟಕ.

**Correspondence**
**ಡಾ. ಪ್ರತಿಮಾ ಕೆ.ಪಿ**
ಸಹಾಯಕ ಪ್ರಾಧ್ಯಾಪಕರು
ಮಹಿಳಾ ಸರ್ಕಾರಿ ಕಾಲೇಜು,
ಮದ್ದೂರು–571428
ಮಂಡ್ಯ ಜಿಲ್ಲೆ, ಕರ್ನಾಟಕ.

# ‘ಅನಿಕೇತನ’ ಕವನ ಸಂಕಲನದಲ್ಲಿ ಪ್ರಕೃತಿ ವರ್ಣನ

**ಡಾ. ಪ್ರತಿಮಾ ಕೆ.ಪಿ**

**ಸಾರಾಂಶ**
ನವೋದಯ ಸಾಹಿತ್ಯ ಸಂದರ್ಭದಲ್ಲಿ ಬಂದ ಕುವೆಂಪು ನಗರ ಪರಿಸರದಿಂದ ದೂರಾದ ಮಲೆನಾಡಿನ ಕಾಡಿನ ಪರಿಸರದಿಂದ ಬಂದ ಮೊದಲ ಮಹತ್ವದನ ಕವಿ. ಪ್ರಕೃತಿಯಾರಾಧನೆಯೇ ಪರಮನಾರಾಧನೆ ಎಂಬ ನಂಬಿಕೆಯುಳ್ಳ ಕವಿಯ ಸಾಹಿತ್ಯದ ಪ್ರಮುಖ ಲಕ್ಷಣವೇ ಪ್ರಕೃತಿಪ್ರಿಯತೆ. ಅವರ ಆರಂಭದ ಕವನ ಸಂಕಲನಗಳಲ್ಲಿ ಒಂದಾದ ‘ಅನಿಕೇತನ’ ಕವನ ಸಂಕಲನವೂ ಇದರಿಂದ ಹೊರತಾಗಿಲ್ಲ. ಪ್ರಸ್ತುತ ಕವನ ಸಂಕಲನದಲ್ಲಿ ಕವಿ ಸೂರ್ಯೋದಯ ಗೀತೆಗಳು, ಪುಷ್ಪರಾಶಿಯ ವರ್ಣನೆ, ಹಕ್ಕಿಗಳ ಚಿಲಿಪಿಲಿ, ಪ್ರಕೃತಿಯಲ್ಲೇ ಭಗವಾನ್ ದರ್ಶನ..ಹೀಗೆ ಪ್ರಕೃತಿ ಚಿತ್ರಣದ ವೈವಿಧ್ಯತೆ ಹಾಗೂ ಮಹತ್ವವನ್ನು ಕಟ್ಟಿಕೊಟ್ಟಿದ್ದಾರೆ. ಪ್ರಕೃತಿಯ ಸಮಸ್ತ ವಿನ್ಯಾಸ, ವಿಲಾಸ, ಲಾಸ್ಯಗಳನ್ನು ಸಂಪೂರ್ಣವಾಗಿ ಅನಾವರಣಗೊಳಿಸಿ, ಅದರಿಂದ ಉಂಟಾಗುವ ಅಸಾಧಾರಣ, ಅಪೂರ್ವ ಅನುಭವಗಳನ್ನು ಓದುಗರಿಗೆ ಅಭಿವ್ಯಕ್ತಿಸಿರುವ ಬಗೆಯನ್ನು ನಾನು ಪ್ರಸ್ತುತ ಲೇಖನದಲ್ಲಿ ವಿಶ್ಲೇಷಿಸುವ ಪ್ರಯತ್ನ ಮಾಡಿದ್ದೇನೆ.

**ಮುಖ್ಯ ಸೂಚಿಕೆ ಪದ:** ಪ್ರಕೃತಿ, ಕುವೆಂಪು, ಅನಿಕೇತನ, ಸೌಂದರ್ಯ , ಪುಷ್ಪ, ಪಕ್ಷಿ

**ಪೀಠಿಕೆ:**
ಕುವೆಂಪುರವರು ಕನ್ನಡ ಸಾರಸ್ವತ ಲೋಕಕ್ಕೆ ವಿಶಿಷ್ಟತೆಯನ್ನು ತಂದುಕೊಟ್ಟ ಧೀಮಂತ ವ್ಯಕ್ತಿ. ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿದ ಮಹಾನ್ ಚೇತನ. ಕನ್ನಡ ನಾಡಿನ ಹೆಮ್ಮೆಯ ರಸ ಋಷಿ, ಋಷಿ ಕವಿ, ರಾಷ್ಟ್ರಕವಿ, ಕನ್ನಡದ ಮತ್ತೋರ್ವ ವರಕವಿಗಳಾದ ಬೇಂದ್ರೆಯವರಿಂದಲೇ ‘ಯುಗದ ಕವಿ ಜಗದ ಕವಿ’ ಎಂದು ಕೀರ್ತಿವಂತರಾಗಿದ್ದವರು. ಕನ್ನಡ ಸಾಹಿತ್ಯವನ್ನು ವಿಶ್ವ ಸಾಹಿತ್ಯ ವೇದಿಕೆಗೆ ಕೊಂಡೊಯ್ದ ವಿಶ್ವಮಾನವ. ಕನ್ನಡದ ಮಹಾನ್ ಚೇತನ. ವರ್ತಮಾನದ ನಿತ್ಯವನ್ನು, ತ್ರಿಕಾಲದ ಭವ್ಯವನ್ನೂ, ಭೂಮವನ್ನೂ, ಅಲ್ಪವನ್ನೂ ಒಂದು ಪೂರ್ಣದೃಷ್ಟಿಯಲ್ಲಿ ಒಳಗೊಳ್ಳಲು ಪ್ರಯತ್ನಿಸಿದ ತಪಸ್ವಿ. ‘ಕಾಡಿನ ಕೊಳಲಿದು, ಕಾಡಕವಿಯು ನಾ, ನಾಡಿನ ಜನರೊಲಿನಾಲಿಪುದು’ ಎಂಬ ಭಿನ್ನಹದೊಂದಿಗೆ ಕಳೆದ ಶತಮಾನದ ಮೂರನೇ ದಶಕದಲ್ಲಿ ಕನ್ನಡ ನವೋದಯವನ್ನು ಪ್ರವೇಶಿಸಿದ ಈ ಕಾಡಿನ ಕವಿ ಅನಂತರ ನಾಡಿನ ಕವಿಯಾಗಿ ಕುವೆಂಪು ಎಂಬ ಮೂರಕ್ಷರದಿಂದಲೇ ಕನ್ನಡಿಗರ ಮನೆ ಮಾತಾದವರು.

ಮಾನವ ಮತ್ತು ಪ್ರಕೃತಿಯ ಸಂಬಂಧ ಅನಾದಿಯು,ಅನನ್ಯವೂ ಆದದ್ದು. ಮಾನವನ ಆಲೋಚನೆಗೆ ಮೂಲ ಪ್ರೇರಣೆಯೆ ಪ್ರಕೃತಿ. ಪ್ರಕೃತಿಯು ಮಾನವನಿಗೆ ಜೀವನಾವಶ್ಯಕ ಅಷ್ಟೇ ಅಲ್ಲ ಜೀವನೋತ್ಸಾವೂ ಹೌದು.ಮಾನವನ ಮೊದಲ ಅಭಿವ್ಯಕ್ತಿ ಆರಂಭವಾಗಿದ್ದೇ ಪ್ರಕೃತಿಯ ಒಡನಾಟದಿಂದ. ಸಹಜವಾಗಿಯೇ ಪ್ರಕೃತಿಯ ಸೊಬಗಿಗೆ ಮಾರುಹೋದ ಕವಿಗಳು ಕಾವ್ಯದಲ್ಲಿ ವಿವಿಧ ನೆಲೆಗಳಲ್ಲಿ ಪ್ರಕೃತಿಯನ್ನು ಆರಾಧಿಸಿದರು. ನವೋದಯ ಸಂದರ್ಭದಲ್ಲಿ ಕಾವ್ಯದಲ್ಲಿ ಪ್ರಕೃತಿ ಹಲವು ವೈವಿಧ್ಯತೆಗಳೊಂದಿಗೆ ವಾಪಕವಾಗಿ ಭಿನ್ನ ಭಿನ್ನ ನೆಲೆಗಳಲ್ಲಿ ಅನಾವರಣಗೊಂಡಿತು. ಇಂಥ ಸಂದರ್ಭದಲ್ಲೇ ಕಾವ್ಯ ರಚನೆಗೆ ತೊಡಗಿದ ಕುವೆಂಪುರವರು ನಿಸರ್ಗದ ಮಡಿಲಿನಲ್ಲಿಯೇ ಹುಟ್ಟಿ ಬೆಳೆದು ಎಳವೆಯಿಂದಲೇ ಅದರ ಅಂತರಂಗದ ಆತ್ಮೀಯ ಸ್ಪರ್ಶವನ್ನು ಪಡೆದವರು. ಆದ್ದರಿಂಲೇ ಪ್ರಕೃತಿಯ ಚೆಲುವು ಅವರ ಸಾಹಿತ್ಯದಲ್ಲಿ ಸಂಪೂರ್ಣವಾಗಿ ಅನಾವರಣಗೊಂಡಿದೆ. ಅದರಲ್ಲಿ ಅವರ ಅನಿಕೇತನ ಕವನ ಸಂಕಲನ ಪ್ರಮುಖವಾದದ್ದು.

ಪ್ರಸ್ತುತ ಲೇಖನವು ಕುವೆಂಪುರವರ 'ಅನಿಕೇತನ' ಕವನ ಸಂಕಲನದ ಕವನಗಳ ವಿಶ್ಲೇಷಣೆ ಮಾಡುವ ಆಶಯ ಹೊಂದಿದೆ. 1962ರಲ್ಲಿ ಪ್ರಥಮ ಮುದ್ರಣ ಕಂಡ ಸಂಕಲನದಲ್ಲಿ 1935 ರಿಂದ 1960 ರವರೆಗೆ ರಚಿತವಾದ ಒಟ್ಟು 40 ಕವನಗಳಿವೆ. ಇಲ್ಲಿ ಬಹುತೇಕ ಪ್ರಕೃತಿ ಸೌಂದರ್ಯಾರಾಧನೆ ಕುರಿತ ಕವನಗಳೇ ವ್ಯಾಪ್ತಿಯನ್ನು ಪಡೆದುಕೊಂಡಿವೆ. 'ಪ್ರಕೃತಿ ಕವಿ' ಎಂದೇ ಪ್ರಸಿದ್ಧರಾದ ಕುವೆಂಪುರವರು ಮಲೆನಾಡಿನ ವ್ಯವಸಾಯದ ಕುಟುಂಬದಿಂದ ಬಂದವರಾಗಿದ್ದು ನಿಸರ್ಗದ ಒಡನಾಟ ಅವರಿಗೆ ಸಹಜವಾಗಿಯೇ ದೊರಕಿದೆ. 'ಮಲೆಯ ನಾಡೆನಗೆ ತಾಯಿ ಮನೆ, ಕಾಡು ದೇವರ ಬೀಡು' ಎಂಬ ಶ್ರದ್ಧೆಯುಳ್ಳ ಕವಿಯು 'ಇಂತಹ ಪ್ರಾತಃಕಾಲ ಜೀವಿಸುವುದಕಿಂತಲೂ ಬೇರೆಯ ಗುರಿ ಜೀವಕೆ ಬೇಕಿಲ್ಲ' ಎನ್ನುವ ನಿಸರ್ಗ ಪ್ರಿಯತೆಯನ್ನು ಮೈಗೂಡಿಸಿಕೊಂಡಿದ್ದಾರೆ.

ನಿಸರ್ಗದ ಬಗೆಗಿದ್ದ ಕವಿಯ ಅನುರುಕ್ತಿ ಸದಾ ಅವರ ಸ್ಮೃತಿಯ ಒಂದು ಭಾಗವಾಗಿ, ನಿರಂತರ ಕಾಡುವ ಹಸಿವಾಗಿ, ತನ್ನ ವ್ಯಕ್ತಿತ್ವದ ಒಂದು ವಿಸ್ತರಣೆಯಂತೆ ಕಣ್ಣೆದುರು ಚಾಚಿಕೊಂಡ ನಿಸರ್ಗದಲ್ಲಿ ರಸಯಾತ್ರಿಕನಾಗಿ ಪರಿವರ್ತನೆಗೊಳ್ಳುತ್ತಾರೆ. 'ಪ್ರಕೃತಿಯಾರಾಧನೆಯೇ ಪರಮನಾರಾಧನೆ' ಎನ್ನುವ ಕವಿಗೆ ಪ್ರಕೃತಿಯ ಚೆಲುವೆಲ್ಲವೂ ದೈವದ ಸಾಕ್ಷಾತ್ಕಾರವೇ ಆಗಿದೆ. ಕವಿಗೆ ಪ್ರಕೃತಿ ಎಂದೊಡನೆ ಮರಗಿಡ ಬಳ್ಳಿಗಳು, ಸುಕೋಮಲ ಸುಮರಾಶಿ, ನದಿ ತೊರೆಗಳು, ಬೆಟ್ಟಗುಡ್ಡಗಳು, ಪ್ರಾಣಿಪಕ್ಷಿಗಳು... ಇವುಗಳನ್ನು ವರ್ಣಿಸುತ್ತಲೇ ಕವಿ ಇಂದ್ರಿಯಗಮ್ಯ ಅನುಭವವನ್ನು ದಾಟಿ ದೈವೀ ಅನುಭವದ ಕಡೆಗೆ ನಡೆಯುತ್ತಾರೆ.

**ಸೂರ್ಯೋದಯ ಗೀತೆಗಳು**

ಪ್ರಕೃತಿಯ ಅಂಶವಾದ ಸೂರ್ಯೋದಯ ಗೀತೆಗಳನ್ನು ಕುವೆಂಪು ಬರೆದಷ್ಟು ಮತ್ತಾರೂ ಬರೆದಿಲ್ಲ ಎನ್ನಬಹುದು. ಕವಿ ತಮ್ಮ ಸೂರ್ಯೋದಯ ಗೀತೆಗಳಲ್ಲಿ ತಾವು ಜೀವನದುದ್ದಕ್ಕೂ ನಡೆಸಿದ ಸೂರ್ಯೋಪಾಸನೆಯ ಫಲವಾಗಿ ಕಂಡುಂಡ ಸೂರ್ಯ ಸೌಂದರ್ಯದಿಂದಾದ ರಸಾನಂದವನ್ನು ಕವಿತೆಗಳ ಮೂಲಕ ನಮಗೆ ಉಣಬಡಿಸಿದ್ದಾರೆ. 'ಇಬ್ಬನಿಯವತಾರ', 'ಸೋಹಮಸ್ಮಿ', 'ನವಿಲುಕಲ್ಲಿನಲ್ಲಿ ಮತ್ತೊಮ್ಮೆ', 'ನಮಸ್ತೆ' ಕವನಗಳು ಉದಯಕಾಲದ ವಿವರವಾದ ವರ್ಣನೆಗಳಿಂದ ಸೂರ್ಯನಂತೆ ಉಜ್ವಲವಾಗಿ ಬೆಳಗುತ್ತಿವೆ. ಹಚ್ಚನೆಯ ಹುಲ್ಲಿನ ಬಯಲಿನಲ್ಲಿ ಬೆಳ್ಳನೆಯ ಇಬ್ಬನಿಯ ಹಿಮಮಣಿ ವಜ್ರದ ಕಿಡಿಯಂತೆ ಹೊಂಬಿಸಿಲಿನ ಕದಿರಿಗೆ ಮಿರುಗುವುದನ್ನು ಕಂಡ ಕವಿ 'ಕಾರಿರುಳಿನ ಮಿಂಚುಂಬುಳುವಂತೆ, ಕರ್ದಿಂಗಳ ಬಾನಿನ ಅರಿಲಂತೆ.. ಸೂರ್ಯನ ಕಿರಣ ಸೋಕಿ ಇಬ್ಬನಿ ಹೊಳೆಯುವ ಪರಿಯನ್ನು ಬಣ್ಣಿಸಿದ್ದಾರೆ. ಜಗತ್ ಶಾಂತಿಗೆ ಬೆಂಬಲವಾಗುವ ತಪೋರೂಪದ ಈ ಇಬ್ಬನಿ ಬರಿ ಹನಿಯಲ್ಲ ಸ್ವರ್ಗಾದೇಶಂ' (ಅನಿಕೇತನ,ಪುಟ 29) ಎನ್ನುತ್ತಾರೆ. ಉಳಿದ ಕೀರ್ತಿ ಶನಿಗಳನ್ನು ಬಿಟ್ಟು ಇಬ್ಬನಿಯನ್ನು ಕೀರ್ತಿಸು, ಆಲಂಗಿಸು ಎನ್ನುತ್ತಾ ನಿಸರ್ಗ ಸೌಂದರ್ಯದಲ್ಲಿ ದೋಷವನ್ನು ಮರೆತು ಶಾಂತಿ ದೇವತೆಯ ಪ್ರಾಮುಖ್ಯತೆಯನ್ನು ವಿವರಿಸುತ್ತಾರೆ.

'ಸೋಹಮಸ್ಮಿ' ಕವನ ಒಂದು ಅನುಭಾವ ಗೀತೆಯಾಗಿದ್ದು 'ಅಹಮಸ್ಮಿ ಅಹಮಸ್ಮಿ ಆಹಂ ಅಸ್ಮಿ ಆಶೀರ್ವದಿಸುತ್ತೈತಂದನ್ನೈ ಮಹರ್ಷಿ, ವೈಶಾಖ ಉದಯ ದಿನಮಣಿ ಅರಶ್ಮಿ,ದೇವ ಧೈರ್ಯಾಮೃತವ ಜೀವಲೋಕಕ್ಕೆರೆದು ಮರ್ತ್ಯಕೆ ಅಮರ್ತ್ಯದ ಗವಾಕ್ಷಮಂ ಕೊರೆದು..' (ಅನಿಕೇತನ,ಪುಟ 6) ಎಂದು ಆರಂಭವಾಗಿ 'ಸೂರ್ಯದೇವನಿಗೆ ಸುಸ್ವಾಗತವನ್ನು ಬಯಸಿ ದೃಷ್ಟಿ ಪೂಜೆಯನ್ನು ಸಲ್ಲಿಸಿ ಮಂತ್ರಾಭಿವಂದನದಿಂದ ಸತ್ಕರಿಸುವ ಒಂದು ಗೀತೆಯಾಗಿದೆ. 'ನವಿಲು ಬಣ್ಣದಲ್ಲಿ ಮತ್ತೊಮ್ಮೆ' ಕವನದಲ್ಲಿ ಯಾವ ಋತುವಿನಲ್ಲಿ, ಯಾವ ಸ್ಥಳದಲ್ಲಿ, ಯಾವ ಹೊತ್ತಿನಲ್ಲಿ ಸೂರ್ಯನ ಉದಯವನ್ನು ದರ್ಶಿಸಿದರು ಎಂಬುದಲ್ಲದೆ, ಸೂರ್ಯನ ಉದಯವು ಕವಿಯ ಹೃದಯದಲ್ಲಿ ಮೂಡಿಸಿದ ಭಾವದ ಅನುರಣನ ಎಂತಹದೆಂಬುದು ಸ್ಪಷ್ಟವಾಗುತ್ತದೆ. ಆ ಸೂರ್ಯೋದಯದ ಉಷಾರವಿಯ ದರುಶನ ಪಡದ ತಾನೇ ಧನ್ಯ ಎಂದು ಹೇಳುವ ಕವಿ ಸೂರ್ಯೋದಯವನ್ನು 'ಹಿಂಜಿದರಳೆಯ ಹಿಂಡೋ? ಐರಾವತದ ದಂಡೋ? ಮಂಜೋ? ಇಂಗಡಲೋ? ಸಾಕ್ಷಾತ್ಕಾರವೋ?' ಇದನ್ನು ದರುಶನ ಪಡೆದ ತಾನೇ ಧನ್ಯ' (ಅನಿಕೇತನ,ಪುಟ 8) ಎನ್ನುತ್ತಾರೆ. 'ನಮಸ್ತೆ' ಕವನವು ಮುಚ್ಚಿದ ಬಾಗಿಲನ್ನು ತೆರೆದೊಡನೆಯೇ ಮೂಡಿದ ನೇಸರ ರಶ್ಮಿಯ ಸಾಕ್ಷಾತ್ಕಾರದ ದಿವ್ಯಾಘಾತಕ್ಕೆ ಸಿಕ್ಕಿದ ರವಿ ರಸಾನಂದದ ಸಮುದ್ರವನ್ನು ಹೊಕ್ಕ ಚಿತ್ರಣವನ್ನು ನೀಡುತ್ತದೆ. ಮಾಗಿಯ ಕಾಲದ ಸೂರ್ಯೋದಯದ ವರ್ಣನೆಯನ್ನು ನೀಡುತ್ತಾ ಸೂರ್ಯೋದಯದ ಎಳೆಯ ಕಿರಣಗಳಿಗೆ ತೋಟದಲರಳಿದ ಹೂ ಶ್ರೀಮದ್ ಭಗವದ್ಗಿತೆಯಾದ ಬಗೆಯನ್ನು ಬಣ್ಣಿಸುತ್ತಾರೆ.

**ಪುಷ್ಪಗೀತೆಗಳು:** ಪ್ರಕೃತಿ ಗೀತೆಗಳಲ್ಲಿ ಹೂವಿನ ಸೌಂದರ್ಯ, ಉದ್ಯಾನವನದ ಬಣ್ಣನೆ ಕವನ ಸಂಕಲನದಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಜರ್ಬರಾ, ಮ್ಯಾಗೋಲಿಯಾ ಗ್ರಾಂಡಿಫ್ಲೋರಾ, ಹೂವಿನ ತೋಟದಲ್ಲಿ ಪುಷ್ಪಸಮಾಧಿ ಉದ್ಯಾನದಲ್ಲಿ ಧ್ಯಾನಯೋಗಿ, ಭಗವಂತನೆ ಕವಿ ಸಹೃದಯನಾಂ, ಹೂವಿನ ತೋಟದಲ್ಲಿ, ಪುಷ್ಪ ಭಗವಾನ್, ಒಂದು ಗುಲಾಬಿ ಹೂವಿಗೆ, ತಾಯಿಯ ಆಶ್ವಾಸನೆ, ಪವಾಡ ಸಂದರ್ಶನ... ಬಹುತೇಕ ಕವನಗಳು ಪುಷ್ಪರಾಶಿಯ ಸೌಂದರ್ಯದ ವರ್ಣನೆಯ ಅನುಭೂತಿಯನ್ನು ನೀಡುತ್ತವೆ. 'ಜರ್ಬರಾ' ಹೂವಿನ ಸೌಂದರ್ಯವನ್ನು ವರ್ಣಿಸುವ ಕವಿ 'ಪಂಚಬಾಣ ರಕ್ತಕಿರಣೆ ಮನ್ಮಥ ಸತಿ ಅಲಕ್ತಚರಣೆ, ಜೀರ್ಕೋವಿಯ ಓಕುಳಿಯೆಗೆ ಚಿಮ್ಮುವಳೇ ನಿರ್ಜರಾ' (ಅನಿಕೇತನ,ಪುಟ 15) ಎಂದು ವರ್ಣಿಸುತ್ತಾ, ಹೂವಿನ ಸೌಂದರ್ಯವನ್ನು ಆಸ್ವಾದಿಸದಿದ್ದರೆ ಹೂ ಮತ್ತು ನೀನು ಇಬ್ಬರೂ ಶೂನ್ಯ. ಮನುಷ್ಯ ಭವದಲ್ಲಿ ಪ್ರಕೃತಿಯನ್ನು ಆರಾಧಿಸಿದರೆ ಮಾತ್ರ ಭಗವಂತನನ್ನು ತಲುಪಲು ಸಾಧ್ಯ. ಆದ್ದರಿಂದ ಪ್ರಕೃತಿಯನ್ನು ನೋಡು, ಗಮನಿಸು, ಬಾಗು, ಪರಿಭಾವಿಸು, ಆಸ್ವಾಧಿಸು, ಧ್ಯಾನಿಸು, ಪ್ರಕೃತಿಯೊಳಗೆ ಒಂದಾಗು ಎಂದು ಕರೆ ನೀಡುತ್ತಾರೆ.

'ಮ್ಯಾಗ್ನೋಲಿಯಾ ಗ್ರಾಂಡಿಫ್ಲೋರಾ' ಮೊಗ್ಗಾಗಿ–ಮೊಗ್ಗಿನಿಂದ ಹೂವಾಗಿ ಅರಳುವುದನ್ನು ವರ್ಣಿಸುವ ಕವಿ 'ಬೆಳ್ಳಿ ಬಿಳಿ ಕಲಶಶಿಶು ಬಾಯ್ದುಟಿಯ ತೆರೆವಂತೆ, ಅಲರುತಿದೆ ಮೂರು ಲೋಕದ ಮೋಹ ಕರೆವಂತೆ, ದುಗ್ಧವಳಿದು ಮುಗ್ಧತೆಯ ಮೈ ಹೊರೆಯುವಂತೆ, ದಿವ್ಯ ಧಾಮದ ಗರ್ಭಗೃಹವೆ ಕಣ್ ತೆರೆಯುವಂತೆ' (ಅನಿಕೇತನ,ಪುಟ 19) ಎಂದು ಹೇಳುತ್ತಾ 'ಭೀಮತಂದ ಸೌಗಂಧಿಕಾ ಕುಸುಮ ಇದರೆ ಅಸಮ' ಎಂಬಲ್ಲಿಗೆ ಹೂವಿಗೆ ಸೌಂದರ್ಯವನ್ನು ಎತ್ತಿ ಹಿಡಿಯುತ್ತಾರೆ. ಪುಷ್ಪದ ಅಲರು ಋತು ವಸಂತನ ಸಖನ ಚೈತ್ರನಾಗಮನಕ್ಕೆ ಸ್ವಾಗತವ ಬಯಸುವಂತೆ ಅರಳಿದೆ ವಿಳಂಬಿಯಲಿ ಎಂದು ಬಣ್ಣಿಸುತ್ತಾರೆ. 'ಹೂವಿನ ತೋಟದಲ್ಲಿ ಪುಷ್ಪ ಸಮಾಧಿ' ಕವನದಲ್ಲಿ ಇಲ್ಲಿ ಉಸಿರು ಒಡಲು ಎಲ್ಲ ಹೂವು ಎನ್ನುತ್ತಾ ಹೂವಿನ ತೋಟವನ್ನು ವರ್ಣ ಜಲಧಿಗೆ ಹೋಲಿಸುತ್ತಾ ಕವಿಯನ್ನು ರಸ ಸಮಾಧಿಯಲ್ಲಿ ಮುಳುಗಿಸಿದ ಹೂವಿನ ಅಗೋಚರ ಶಕ್ತಿಯನ್ನು ಬಣ್ಣಿಸಿದ್ದರೆ, 'ಉದ್ಯಾನದಲ್ಲಿ ಧ್ಯಾನ ಯೋಗಿ' ಕವನದಲ್ಲಿ ಪ್ರಕೃತಿಯಲ್ಲಿ ಭಗವಂತನನ್ನು ಕಾಣುವ ಆಶಯವಿದೆ. 'ಸೌಂದರ್ಯರೂಪಿ ಭಗವಂತನಿಲ್ಲಿ ಪುಷ್ಪವೇಷಿ' ಎನ್ನುತ್ತಾ ಇದು ಬರಿಯ ಉದ್ಯಾನವಲ್ತೋ ಇದು ಪಕ್ಷಿ ಕಾಶಿ ಎನ್ನುತ್ತಾ ಪ್ರಕೃತಿ ಮತ್ತು ದೈವಗಳೆರಡರ ನಡುವೆ ಅಭಿನ್ನತೆ ಸೃಷ್ಟಿಸುತ್ತಾರೆ.

'ಭಗವಂತನೆ ಕವಿ, ಸಹೃದಯ ತಾಂ' ಕವನದಲ್ಲಿ ಇಳೆಗೆ ಅದ್ಭುತ

ಪ್ರಕೃತಿ ನೀಡಿದ ಬಾನು, ಬಯಲು, ಕಾಡು, ಮಿಗ, ಶಿಶು, ಹಕ್ಕಿಯ ಗೂಡಿನ ಮೊಟ್ಟೆ, ಮಿಂಚುವ ಚುಕ್ಕಿಯ ರೆಕ್ಕೆಯ ಚಿಟ್ಟೆ, ಮಲೆ ಬೆಟ್ಟ, ಹೂವಕ್ಕಿ, ಇಂಚರ ಇವುಗಳನ್ನು ಸೃಷ್ಟಿಸಿದ ಭಗವಂತನೇ ಕವಿ. ಪ್ರಕೃತಿಯ ಸೃಷ್ಟಿ ಎಲ್ಲ ಸೃಷ್ಟಿಗಳಿಗಿಂತ ಅದ್ಭುತ, ಹಿರಿದಾದದ್ದು. ಆದ್ದರಿಂದ ಭಗವಂತನೇ ಕವಿ, ತಾನು ಕೇವಲ ಸಹೃದಯ ಎನ್ನುತ್ತಾರೆ. 'ಹೂವಿನ ತೋಟದಲ್ಲಿ' ಕವನದಲ್ಲಿ ಹೂವಿನ ತೋಟವನ್ನು ದೇವಾಲಯಕ್ಕೆ ಹೋಲಿಸುತ್ತಾ ಪ್ರಕೃತಿ ಬಣ್ಣಬಣ್ಣದ ರೂಪದಲ್ಲಿ ಭಗವತ್ ಪ್ರೇಮ ತೋರಿಸುತ್ತಿದೆ. ಕಬ್ಬಿಗನೆದೆಯಲ್ಲಿ ಶ್ರದ್ಧಾನಂದವನ್ನು ಮೂಡಿಸುತ್ತಿದೆ. ದೇವಾಲಯವೇ ಹೂವಿನ ತೋಟಂ ಎನ್ನುತ್ತಾ. ಪ್ರಕೃತಿಯಲ್ಲೇ ಭಗವಂತನ ಸ್ವರೂಪವನ್ನು ದರ್ಶಿಸುತ್ತಾರೆ. ಹೂವಿನ ದರ್ಶನ ಕೇವಲ ದರ್ಶನವಲ್ಲ, ಇದು ಸಾಕ್ಷಾತ್ಕಾರ, ಇದರ ಅನುಭವಕ್ಕೆ ಬೇರೆ ಹೆಸರಿಲ್ಲ ಎಂದು 'ಪುಷ್ಪ ಭಗವಾನ್' ಕವನದಲ್ಲಿ ಸಾರುತ್ತಾರೆ.

'ತಾಯಿಯ ಆಶ್ವಾಸನೆ'ಯಲ್ಲಿ ಪ್ರಕೃತಿಯಲ್ಲೇ ಮಾತೆಯನ್ನು ಕಾಣುವ ಕವಿಯ ಕಲ್ಪನೆ ಸುಂದರವಾಗಿ ಅರಳಿದೆ. ಮಗುವನ್ನು ಬೇಸರಿಸಿಕೊಳ್ಳಬೇಡೆಂದು ಹೇಳುವ ಪ್ರಕೃತಿ ಮಾತೆ ತಾನು 'ನಿನಗಾಗಿ ಈ ಹಸಿರು ಹುಲ್ಲಾಗಿ ಬಂದೆ. ಮತ್ತೆ ಮುತ್ತಿನಿಬ್ಬನಿಯಾಗಿ ನಿಂದೆ. ಅತ್ತ ಕವಿಯಾಗಿ ಮೂಡಿ ಇತ್ತ ಕಿರಣವೇ ಆಗಿ ಆಡಿ ನೋಡಿಲ್ಲಿ, ಮಿರುಗುತಿಹೆ ನಿನ್ನಿದಿರುನಲ್ಲೆ' ಎಂದು ಮಾತೆಯ ರೂಪವನ್ನು ಚಿತ್ರಿಸುತ್ತಾರೆ.

**ಪಕ್ಷಿಗೀತೆಗಳು:** ಪ್ರಕೃತಿಯ ಸೌಂದರ್ಯದಲ್ಲಿ ಪಕ್ಷಿಗಳ ಕಲರವ, ಅವುಗಳ ಹಾರುವಿಕೆಯಲ್ಲಿ ದೇವರ ರುಜು ಕಾಣುವ ಕವಿ ಕಾಣ್ಕೆ ಈ ಕವನ ಸಂಕಲನದಲ್ಲಿಯೂ ಮುಂದುವರೆದಿದೆ. 'ಪಕ್ಷಿ' ಕೇವಲ ಪಕ್ಷಿಯಲ್ಲ. ಅದು ತರುಚೇತನ ಚತ್ಸುಷಿ, ಋಷಿ ಮಾನವನೋರ್ವನ ಅಭಿಪ್ರಾಗಾಯಿತ್ರಿ, ಶ್ರೀ ಗುರುವಿನ ಅಹಮಸ್ಮಿಯ ಆಶೀರ್ವಾದ, ಭಾಷೆಯೆ ಅಲ್ಲದ ಅರ್ಥವೇ ಇಲ್ಲದ ಅತಿವಾಙ್ಮಯ ವೇದ ಎಂದು ಹಕ್ಕಿಗಳು ಮತ್ತು ಅವುಗಳ ಉಲಿವಿಗೆ ಬಹು ದೊಡ್ಡ ಸ್ಥಾನ ನೀಡುತ್ತಾರೆ. 'ಹಕ್ಕಿಗಳ ಸಂಗದಲಿ ರೆಕ್ಕೆ ಮೂಡುವುದೆನಗೆ; ಹಾರುವುದು ಹೃತ್ಪಕ್ಷಿ ಲೋಕಗಳ ಕೊನೆಗೆ! ಹಾರಿ ಲೋಕದ ಕೊನೆಗೆ, ಬಾಣದಂತೆರಗುವುದು ಹಾಲು ಜೇನ್ದೆನೆಗೆ!' (ಅನಿಕೇತನ,ಪುಟ 37)ಎನ್ನುತ್ತಾ ಹಕ್ಕಿಗಳ ಸಾಂಗತ್ಯದ ಸಂಭ್ರಮವನ್ನು ಸವಿಯುತ್ತಾರೆ. ಬೆಳ್ಳಕ್ಕಿಯ ಬದುಕನ್ನು ಚಿತ್ರಿಸುತ್ತಾ ಜಗನ್ಮಾತೆಯ ಆಶೀರ್ವಾದದ ಬಾನಕ್ಷತೆ ಈ ಬೆಳ್ಳಕ್ಕಿ ಎನ್ನುತ್ತಾರೆ. ಅಕ್ಕಿ, ಮಣ್ಣು ಹುಳುಗಳನ್ನು ತಿನ್ನುತ್ತಾ ತೆರಳುವ ಬಕಪಕ್ಷಿಯ ಪಂಕ್ತಿ ಕವಿಗೆ ಬೇರೊಂದು ಭಗವಂತನ ಅನುಭೂತಿಯಂತೆ ಕಾಣಿಸುತ್ತದೆ. 'ಹೊರಸಿನುಲಿ! ಹೊಲದ ವಾಣಿ! ಅ: ವಿಶ್ವವಾಣಿ!! ಎಲ್ಲಿಂದಲೋ ಹೊಮ್ಮುತಿದೆ; ಹಕ್ಕಿಯಿಂದ ಚಿಮ್ಮುತಿದೆ; ಕವಿಹೃದಯಕೆ ದುಮುಕುತಿದೆ ರಸಜಲಪಾತದ ಘೋಷದಲಿ'(ಅನಿಕೇತನ,ಪುಟ 41) ಹೊಲದಲ್ಲಿನ ಪಕ್ಷಿಯ ಉಲಿ ಕವಿಗೆ ವಿಶ್ವವಾಣಿಯಾಗಿ ಕೇಳುತ್ತದೆ.

ಕವನ ಸಂಕಲನದ ಬಹುತೇಕ ಕವನಗಳಲ್ಲಿ ನಿಸರ್ಗದ ಚೆಲುವಿನ ವೈಭವದ ಮುಖಗಳನ್ನು ತೆರೆದಿಡುತ್ತಲೇ ಕವಿ ಅವರು ಪಡೆದ ಅನುಭವಗಳು ಸೌಂದ್ರ್ಯಾನುಭವ ಮಾತ್ರವಾಗದೆ ಅದನ್ನು ಮೀರಿದ ಆಧ್ಯಾತ್ಮಿಕ ನೆಲೆಯನ್ನು ತಲುಪುತ್ತವೆ. ಅವರ ಕವನಗಳಲ್ಲಿ ಕವಿ ಕುವೆಂಪು ಏಕಾಂಗಿಯಾಗಿ ನಿಸರ್ಗದೊಂದಿಗೆ ನಡೆಸುವ ಅನುಸಂಧಾನವು ಅತ್ಯಂತ ಉತ್ಕಟವಾದ ಅನುರಕ್ತಿಯ ರೂಪದ್ದೂ, ಆರಾಧನೆಯ ಸ್ವರೂಪದ್ದೂ ಆಗಿದೆ. ಅವರು ತಮ್ಮ ಧ್ಯಾನಸ್ಥಿತಿಯ ಮೂಲಕ ನಿಸರ್ಗದೊಂದಿಗೆ ಏರ್ಪಡಿಸಿಕೊಳ್ಳುವ ಸಂವಾದ ಹಾಗೂ ತಲ್ಲೀನತೆಯಲ್ಲಿ ಅವರು ಪಡೆಯುವ ತಾದ್ಯಾತ್ಮಾನುಭವ, ಸೌಂದರ್ಯ ನಿಷ್ಠೆ ಹಾಗೂ ವೈಚಾರಿಕೆತೆಯು ಸಮ್ಮಿಳಿತವಾಗಿರುವುದನ್ನು ಗುರುತಿಸಬಹುದು. ನಿಸರ್ಗದೊಂದಿಗಿನ ಈ ಅನುರುಕ್ತಿ ಕವಿಗೆ ಜನ್ಮಜಾತವಾಗಿ ಬಂದಿರುವುದಾಗಿದೆ. ಈ ಕುರಿತು ಕುವೆಂಪುರವರೇ ಹೀಗೆ ಹೇಳಿಕಂಡಿದ್ದಾರೆ. 'ತಾನು ಮಲೆನಾಡಿಗನು,ಮಲೆನಾಡಮ್ಮನ ಹೊಟ್ಟೆಯಲ್ಲಿ ಹುಟ್ಟಿ, ಮಡಿಲಲ್ಲಿ ಬೆಳೆದು, ತೊಡೆಯ ಮೇಲೆ ನಲಿದು, ಆ ತಾಯಿಯ ಮೊಲೆಹಾಲು ಕುಡಿದು ಬೆಳೆದು ಬಂದವನು. ಮಲೆನಾಡೆಂದರೆ ನನಗೆ ಬಹಳ ಮಮತೆ.ಒಂದು ಬಗೆಯ ಕುರುಡು ಮೋಹ ಎಂದರೂ ಎನ್ನಬಹುದು.ಮಲೆನಾಡು ಸೊಬಗಿನ ಬೀಡು, ಸಿಡಿಲು ಮಿಂಚುಗಳ ನಾಡು,ಸಾಲುಸಾಲಾಗಿ ಎದ್ದಿರುವ ಬೆಟ್ಟಗಳು,ಮಾಲೆಮಾಲೆಯಾಗಿ ಬೆಳೆದಿರುವ ಕಾಡುಗಳು,ಅಲ್ಲಲ್ಲಿ ಬನಬೆಟ್ಟಗಳ ನಡುವೆ ಹರಿವ ಹೊಳೆ ತೊರೆಗಳು,ಕಾಡಿನ ಮೇಲೆ ಮಲಗುವ ಬಿಸಿಲು ಬೆಳ್ದಿಂಗಳು,ವಿಧವಿಧವಾದ ಇಂಚರಗೈವ ಸಾವಿರಾರು ಬಣ್ಣಬಣ್ಣದ ಹಕ್ಕಿಗಳು,ಅನವರತ ವನ ಶ್ರೇಣಿಗಳಿಂದ ಆವೃತವಾದ ಧೀರ ಸಹ್ಯಾದ್ರಿ ಪರ್ವತಗಳ ಕಂದರ ಮಾರ್ಗಗಳಲ್ಲಿ ಮಂಜುಳ ನಾದದಿಂದ ಪ್ರವಹಿಸುವ ತುಂಗಭದ್ರೆ ಶರಾವತಿಯರು,ಶೃಂಗೇರಿ ಮೊದಲಾದ ಪುರಾತನ ಪವಿತ್ರ ಕ್ಷೇತ್ರಗಳು,ಗೇರುಸೊಪ್ಪೆ ಮೊದಲಾದ ದರ್ಶನೀಯ ಪ್ರಕೃತಿ ಸೌಂದರ್ಯ ಸ್ಥಾನಗಳು..ಇವುಗಳಿಂದ ಮೋಹಿತನಾದ ನನಗೆ ಮಲೆನಾಡೆಂದರೆ ಬಹಳ ಮಮತೆ.'(ಸಾಹಿತ್ಯ ಪ್ರಚಾರ,ಪುಟ 15,16) ಈ ಪ್ರಕೃತಿಯ ಅನುಭೂತಿಯೇ ಅನಿಕೇತನ ಕವನ ಸಂಕಲನದ ಕವನಗಳಲ್ಲಿಯೂ ಅಭಿವ್ಯಕ್ತಗೊಂಡಿದೆ.

ಕುವೆಂಪು ಕೇವಲ ಪ್ರಕೃತಿ ವರ್ಣನೆಗಷ್ಟೇ ಸೀಮಿತರಾದವರಲ್ಲ, ಅಜ್ಞಾನ, ಮೂಢನಂಬಿಕೆ, ಶೋಷಣೆ ಇವುಗಳಿಂದ ಮುಕ್ತವಾಗಿ ಬದುಕಲುಬೇಕಾದ ಸಹನೀಯ ವಾತಾವರಣ ನಿರ್ಮಿಸುವ ಸಾಮಾಜಿಕ ಕೈಂಕರ್ಯವನ್ನು ಮಾಡಿದ್ದಾರೆ. ಒಂದು ಜೀವ ಬದುಕಲು ಸಾಧ್ಯವಾಗದಂತಹ ಪರಿಸರ ನಿರ್ಮಾಣವನ್ನು ವಿರೋಧಿಸುವ ಮೂಲಕ ಸಾಮಾಜಿಕ ಕಾಳಜಿ ಎತ್ತಿ ಹಿಡಿಯುವ ಕೆಲಸ ಮಾಡಿದ್ದಾರೆ. 'ಅನಿಕೇತನ' ಪದ್ಯದ ಮೂಲಕ ವಿಶ್ವ ಸಂದೇಶವನ್ನು ಸಾರುವ ಕವಿ 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಪಂಪನ ತಾತ್ವಿಕತೆಯನ್ನು ವಿಸ್ತರಿಸುತ್ತಾರೆ. ನಮಗೆ ಬೇಕಾಗಿರುವುದು ಆ ಮತ ಈ ಮತ ಅಲ್ಲ ಮನುಜ ಮತ, ಆ ಪಥ ಈ ಪಥ ಅಲ್ಲ ಸರ್ವರ ಸರ್ವಸ್ತರರ ಬದುಕು ಎನ್ನುತ್ತಾರೆ. 'ಎಲ್ಲಿಯೂ ನಿಲ್ಲದಿರು ಮನೆಯನೆಂದೂ ಕಟ್ಟದಿರು, ಕೊನೆಯನೆಂದು ಮುಟ್ಟದಿರು, ಓ ಅನಂತವಾಗಿರು' ಎನ್ನುತ್ತಾ ಹುಟ್ಟುತ್ತಲೇ ವಿಶ್ವಮಾನವನಾಗಿ ಹುಟ್ಟುವ ಮಗುವನ್ನು ಬೆಳೆಯುತ್ತಾ ಅಲ್ಪಮಾನವನಾಗಿ, ದೇಶ, ಭಾಷೆ, ಮತ, ಜಾತಿ, ಜನಾಂಗ, ವರ್ಣ ಇತ್ಯಾದಿಗಳಿಗೆ ಬದ್ಧರನ್ನಾಗಿ ಮಾಡುವ ಬೆಳವಣಿಗೆಯನ್ನು ಖಂಡಿಸುತ್ತಾರೆ. 'ಲೋಕ ಉಳಿದು ಬಾಳಿ ಬದುಕಬೇಕಾದರೆ ಪ್ರಪಂಚದ ಎಲ್ಲರೂ ಇವುಗಳೆಲ್ಲವುಗಳಿಂದ ಪಾರಾಗಿ ಅನಿಕೇತನರಾಗಬೇಕು' ಎನ್ನುತ್ತಾರೆ.

ಮನುಷ್ಯ ಮನುಷ್ಯನಾಗಿ ಬದುಕುವುದೇ ಸಾಧ್ಯವಾಗದಂತಹ ವಿದ್ಯಮಾನಗಳು ಸಂಭವಿಸುತ್ತಿರುವ ಈ ಹೊತ್ತಿನಲ್ಲಿ ಅನೇಕ ವಿಚ್ಛಿದ್ರಕಾರಕ ಶಕ್ತಿಗಳಿಂದ ಮನುಷ್ಯತ್ವವೇ ಚೂರು ಚೂರಾಗುತ್ತಿರುವ ಸಂದರ್ಭದಲ್ಲಿ ಕುವೆಂಪುರವರ ವಿಶ್ವಮಾನವ ಕಲ್ಪನೆ ಅತ್ಯದ್ಭುತವಾದದ್ದು. ಮಾನವೀಯತೆಯ ಎತ್ತರದ ಬೆಳಕನ್ನು ಹೊಂದಿರುವಂತದ್ದು. ಜಾತಿಮತಗಳನ್ನು ಮೀರಿ ಬದುಕಬೇಕಾದ ಅವಶ್ಯಕತೆಯನ್ನು ಅದಕ್ಕೆ ಮಾರ್ಗಗಳನ್ನು ಸಾರಿ ಹೇಳುವ ವಿಶ್ವಮಾನವ ಸಂದೇಶ ಹಾಗೂ ಗೀತೆ 'ಅನಿಕೇತನ' ಕುವೆಂಪುರವರ ಒಂದು ಅಪೂರ್ವ ಕೊಡುಗೆಯಾಗಿದೆ.

**ಉಪಸಂಹಾರ:**

ನವೋದಯ ಕಾಲಘಟ್ಟದ ಪ್ರಮುಖ ಕವಿಯಾದ ಕುವೆಂಪು ಹುಟ್ಟಿದ, ಬೆಳೆದ ಪರಿಸರವೇ ಪ್ರಕೃತಿಯ ಮಡಿಲಾಗಿದ್ದು ಆ ಪ್ರಕೃತಿ ಕುರಿತಂತೆ ಅವರ ಒಳನೋಟಗಳು,ವಿಶಿಷ್ಟ ಗ್ರಹಿಕೆಗಳು, ಅನುಭವ

ಆಲೋಚನೆಯ ಸ್ವರೂಪಗಳು, ಪ್ರಕೃತಿಯನ್ನು ಕುರಿತಂತೆ ಅವರ ಅನನ್ಯ ದರ್ಶನ,ಆಧ್ಯಾತ್ಮಿಕತೆ ಅಥವಾ ಅನುಭಾವ,ವೈಚಾರಿಕತೆಯ ಆಶಯ...ಇವೆಲ್ಲವೂ ಕವನ ಸಂಕಲನದಲ್ಲಿ ಅದ್ಭುತವಾಗಿ ಒಡಮೂಡಿವೆ.ಪ್ರಕೃತಿಯರಾಧನೆಯಲ್ಲಿ ಅವಿರತವಾಗಿ ನಿರತರಾದ ಕವಿ ಕುವೆಂಪು ತಮ್ಮೆಲ್ಲ ಕಾನನ ಪ್ರತಿಭೆಯ ಬಲದಿಂದ ಅಸೀಮ ಚೈತನ್ಯಮಯವಾದ ಪ್ರಕೃತಿಮಾತೆಯನ್ನು ಒಲಿಸಿಕೊಂಡು, ಅತ್ಯುನ್ನತವಾದ ನೂರಾರು ಪ್ರಕೃತಿ ಗೀತೆಗಳನ್ನು ಕನ್ನಡ ಸಾಹಿತ್ಯಕ್ಕೆ ಕಾಣಿಕೆಯಾಗಿ ಅರ್ಪಿಸಿದ್ದಾರೆ.

**ಪರಾಮರ್ಶನ ಗ್ರಂಥಗಳು:**

1. ಅನಿಕೇತನ – ಲೇ.ಕುವೆಂಪು, ಉದಯರವಿ ಪ್ರಕಾಶನ,ವಾಣಿವಿಲಾನಪುರಂ,ಮೈಸೂರು,ಎಂಟನೆಯ
2. ಮುದ್ರಣ –2013
3. ಸಾಹಿತ್ಯ ಪ್ರಚಾರ – ಲೇ.ಕುವೆಂಪು, ಕರ್ನಾಟಕ ಸಂಘ,ಶಿವಮೊಗ್ಗ,ಪ್ರಥಮ ಮುದ್ರಣ – 1930
4. ಗಂಗೋತ್ರಿ ಅಭಿನಂದನಾ ಗ್ರಂಥ, ಸಂ. ದೇಜಗೌ, ಗೀತಾ ಬುಕ್‌ಹೌಸ್, ಮೈಸೂರು, ಮುದ್ರಣ – 1968
5. ಸಾಲುದೀಪಗಳು, ಸಂ.ಜಿ.ಎಸ್.ಸಿದ್ದಲಿಂಗಯ್ಯ & ಎಂ.ಎಚ್.ಕೃಷ್ಣಯ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.